quickmarketreports.com

**Date : 24-10-2015**

# ಬೇಳೆಕಾಳು ಆಮದುದಾರರಿಂದ ದಾಸ್ತಾನು ಮಿತಿ ವಿನಾಯತಿಗೆ ಮನವಿ

ಹಲವಾರು ರಾಜ್ಯಗಳು ಬೇಳೆಕಾಳು ದಾಸ್ತಾನಿನ ಮೇಲೆ ಕ್ರಮಕೈಗೊಳ್ಳಲಾರಂಬಿಸಿದ್ದರೂ, ಆಮದುದಾರರು 23/10/2015 ರಂದು ಕೇಂದ್ರ ಅರ್ಥಿಕ ಸಚಿವ ಅರುಣ್ ಜೇಟ್ಲಿಯವರೊಂದಿಗೆ ಸಭೆಯಲ್ಲಿ ದಾಸ್ತಾನು ಮಿತಿಯಿಂದ ಆಮದುದಾರರಿಗೆ ವಿನಾಯತಿ ನೀಡಬೇಕೆಂದು ಮನವಿಮಾಡಿದರೆನ್ನಲಾಗಿದೆ. ಇದರೊಂದಿಗೆ ಆಮದುದಾರಾರು ದರ ನಿಯಂತ್ರಣದಲ್ಲಿಯೆ ಏಜೆನ್ಸಿಗಳಿಗೆ ದಿನವಹಿ 100 ಟನ್ ಆಮದಿತ ಬೇಳೆಕಾಳು ಕಿಲೋಗ್ರಾಂ ಗೆ ರೂ. 135/– ದರದಲ್ಲಿ ಪೂರೈಕೆ ಮಾಡುವ ಕೊಡುಗೆಯ ಪ್ರಸ್ತಾಪ ಮಾಡಿದರೆನ್ನಲಾಗಿದೆ. ಖಾಸಗಿ ವ್ಯಾಪರಿಗಳು 4.18 ಮಿಲಿಯನ್ ಟನ್ ಬೇಳೆಕಾಳು ಆಮದು ಮಾಡುವ ನಿರೀಕ್ಷೆಯಿದೆಯೆನ್ನಲಾಗಿದೆ.

ಆಮದುದಾರರು 2016 ಜನವರಿವರೆಗೆ ಈಗಾಗಲೇ 2.5 ಮಿಲಿಯನ್ ಟನ್ ಬೇಳೆಕಾಳು ಆಮದು ಮಾಡಲು ಕರಾರು ಮಾಡಿದ್ದು 2.5 ಲಕ್ಷ ಟನ್ ಬೇಳೆಕಾಳು ಬಂದರುಗಳಲ್ಲಿವೆಯೆಂದು IPGA ಅಧ್ಯಕ್ಷ ಪ್ರವೀಣ್ ಡೋಂಗ್ರೇಯವರು ಹೇಳಿದ್ದಾರೆನ್ನಲಾಗಿದೆ. ಆಮದು ಬೇಳೆಕಾಳು ಪೂರೈಕೆ ನವೆಂಬರ್ ತನಕ ಮುಂದುವರಿಯಲಿದೆಯೆಂದು ಅವರು ಹೇಳಿ ಅಕ್ರಮ ದಾಸ್ತನು ವಿರುದ್ಧ ಹಲವಾರು ರಾಜ್ಯಗಳು ಕಾರ್ಯಾಚರಣೆ ಕೈಗೊಂಡಿದ್ದು 3149 ರೈಡ್‌ಗಳ ಮೂಲಕ 50656 ಟನ್ ಬೇಳೆಕಾಳು ಮುಟ್ಟುಗೋಲು ಹಾಕಿಕೊಳ್ಳಲಾಗಿದೆಯೆನ್ನಲಾಗಿದೆ. ಕೆಲವು ವಿಧದ ಬೇಳೆಕಾಳು ದರಗಳು ಹಿಂದಿನ ವರ್ಷಕ್ಕಿಂತ ದುಪ್ಪಟ್ಟಾಗಿದೆ. ಹಿಂದಿನೆರಡು ಬೆಳೆಗಳ ಉತ್ಪಾದನೆಯಲ್ಲಿ ಇಳಿಕೆ ಮತ್ತು ಮಳೆಯ ಕೊರತೆಯಿಂದ ಈಗಿನ ಬೆಳೆಯಲ್ಲಿ ಇಳಿಕೆಯ ನಿರೀಕ್ಷೆಯಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ.